ISSN : 2395 0994

# ರಚನಾ

# RACHANA



January to
June-2021

Volume-VI • Issue-I

ಸೃಜನ, ಶೋಧನ
ಸಾಂಸ್ಕೃತಿಕ ಅಂತರರಾಷ್ಟ್ರೀಯ
ಕನ್ನಡ–ಇಂಗ್ಲಿಷ ದ್ವೈಭಾಷಿಕ
ಅರ್ಧವಾರ್ಷಿಕ ಪತ್ರಿಕೆ

Creative, Research
Cultural Studies International
Kannada-English Bilingual
Biannual Journal

12. ಡಾ. ಸೋಮನಾಥ ಯಾಳವಾರರ ಆಧುನಿಕ ವಚನಗಳು : ಸಾಂಸ್ಕೃತಿಕ ಒಳನೋಟಗಳು
**– ದತ್ತಾತ್ರಯ ಸಿ.ಎಚ್** **87**

13. ಪ್ರೊ. ಎಚ್.ಟಿ. ಪೋತೆಯವರ ಕಥೆಗಳು
**– ಡಾ. ವೆಂಕಟೇಶ್ವರ ಕೆ. ಕೊಲ್ಲಿ** **95**

14. ಸಕಲ ಕಲಾವಲ್ಲಭ – ಸಾರಥಿ ಹನುಮಂತಪ್ಪ
**– ರಾಜಶೇಖರ ಬಿರಾದಾರ** **102**

15. ಜನಪದರು ಕಂಡ ಶಿವಭಕ್ತ ಮಾದಾರ ಚೆನ್ನಯ್ಯ
**– ಶಿವಪ್ಪ ಹಣಮಂತ** **109**

16. ಜನಪದ ವೃತ್ತಿಗಾಯಕರು
**– ಶ್ರೀನಿವಾಸ ಬಸವರಾಜ** **116**

17. ಮರೆಯಾಗುತ್ತಿರುವ ಜನಪದ ವಾದ್ಯಗಳು
**– ಶಾಂತಕುಮಾರ** **121**

18. ಭಜನಾ ಪರಂಪರೆ
**– ಸಿದ್ರಾಮಯ್ಯ ನಿಂಗಯ್ಯ** **125**

19. ಯತಿ–ವಡಿ–ಮುಡಿ
**– ಡಾ. ಎಂ.ಎಸ್. ಮಾಗಣಗೇರಿ** **131**

20. ಡಾ. ಎಂ.ಎಂ. ಕಲಬುರ್ಗಿಯವರ ಶೋಧಗಳು : ಸಂಶೋಧನ ಮಹಾಪ್ರಬಂಧ ಸಮೀಕ್ಷೆ
**– ಡಾ. ರಘುಶಂಖ ಭಾತಂಬ್ರಾ** **142**

21. ಗೌತಮ ಬುದ್ಧನ ಜೀವನ ಮತ್ತು ಅಷ್ಟಾಂಗಿಕ ಮಾರ್ಗಗಳು
**– ಬಬ್ರುವಾಹನ ಅಂಬಾರಾಯ** **151**

1. Challenges and Limitations in Teaching-Learning English Language
**- Smt. Suvarna V. Patil** **157**

2. Indian Press during the British rule:
**- Smt. Vijaylaxmi B.V.** **163**

3. An Essay on The Translation of Ideology and Short Stories
**- Dr. Basavanthrao Patil & Dr. Jyothi Keerangi** **169**

4. Celebrating You
**- Dr. Jyothi Keerangi** **177**

5. Challenges & Aspirations of Women's Political Participation in India
**- Dr. Shanthala .A.C** **178**

 ISSN–2395-0994

## ೧೯. ಯತಿ-ವಡಿ-ಮುಡಿ

- ಡಾ. ಎಂ.ಎಸ್. ಮಾಗಣಗೇರಿ

ಪದ್ಯಗಳನ್ನು ರಚಿಸುವಾಗ ಯಾವ ನಿಯಮಗಳನ್ನು ಅನುಸರಿಸಬೇಕು? ಎಂಬ ವಿಂಯುವನ್ನು ತಿಳಿಂಯುಬೇಕಾದರೆ ಅವಶ್ಯವಾಗಿ ಛಂದಶ್ಯಾಸ್ತ್ರದ ಪರಿಚಂಯು ಮಾಡಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳು ತಾವು ಓದುತ್ತಿರುವ ಕನ್ನಡ ಪಠ್ಯ ಪುಸ್ತಕಗಳಲ್ಲಿ ಅದ್ದೋ ಬಗೆಯ ಪದ್ಯಗಳನ್ನು ಓದುತ್ತಾರೆ. ಆ ಎಲ್ಲ ಪದ್ಯಗಳನ್ನು ರಚನೆ ಮಾಡಿದ ಕವಿಗಳು ಹಲಕೆಲವು ನಿಯಮಗಳನ್ನು ಅನುಸರಿಸಿ ಆ ಪದ್ಯಗಳನ್ನು ರಚಿಸಿರುತ್ತಾರೆ. ಯಾವ ನಿಯಮವನ್ನು ಅನುಸರಿಸಿ ಈ ಪದ್ಯಗಳು ರಚಿತವಾಗಿವೆ? ಎಂಬುದನ್ನು ತಿಳಿಯದೆ ಅವುಗಳನ್ನು ಓದಿದರೆ ಅ್ಟು ಪ್ರಯೋಜನವಾಗಲಿಕ್ಕಿಲ್ಲ. ಆದುದರಿಂದ ಮಕ್ಕಳು ಛಂದಶ್ಯಾಸ್ತ್ರದ ಸ್ಥೂಲವಾದ ಪರಿಚಯ ಮಾಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಛಂದಶ್ಯಾಸ್ತ್ರದ ಯತಿ, ವಡಿ, ಮುಡಿಗಳ ಅಧ್ಯಯನವು ಅವಶ್ಯವಾಗದೆ.

ವ್ಯಾಕರಣ ಶಾಸ್ತ್ರವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ಶಾಸ್ತ್ರವಾದರೆ, ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸಂಬಂಧಿಸಿದ ಶಾಸ್ತ್ರವಾಗಿದೆ. ನಾವು ಓದುವ ಪದ್ಯಗಳು ನಾನಾ ರೀತಿಯಾಗಿವೆ. ಕೆಲವು ನಾಲ್ಕು ಸಾಲಿನವು, ಕೆಲವು ಆರು ಸಾಲಿನವು, ಕೆಲವು ಮೂರು ಸಾಲಿನವು, ಕೆಲವು ಸಾಲುಗಳು ಉದ್ದ, ಕೆಲವು ಚಿಕ್ಕವು. ಹೀಗೆ ನಾನಾ ಬಗೆಯ ಪದ್ಯಗಳು ಕಂಡುಬರುತ್ತವೆ. ಅವುಗಳೆಲ್ಲವುಗಳ ಸ್ವರೂಪವನ್ನು ತಿಳಿಯದಿದ್ದರೂ ಮುಖ್ಯವಾದ ಕೆಲವು ಪದ್ಯಗಳ ರೀತಿನೀತಿಗಳನ್ನು ತಿಳಿಯಲೇಬೇಕು.

ಪದ್ಯಗಳು ವಿಸ್ತಾರವಾದ ವಿಯಗಳನ್ನು ಸಂಕ್ಷೇಪವಾಗಿ ತಿಳಿಸಲೂ, ರಸವತ್ತಾದ ಅಂಶಗಳನ್ನು ಸ್ವಾರಸ್ಯ ಮಾತುಗಳಿಂದ ವರ್ಣಿಸಲೂ, ಮತ್ತು ಅವುಗಳನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲೂ ಅನುಕೂಲವಾದವು. ಅಲ್ಲದೆ ರಾಗವಾಗಿ ಹಾಡಿಯೂ ಆನಂದ ಪಡಬಹುದು. ಇತರರನ್ನೂ ಆನಂದಗೊಳಿಸಬಹುದು. ಇಂಥ ಮಹತ್ವದ ಕಾವ್ಯಭಾಗಗಳಾದ ಪದ್ಯಗಳ ರಚನಾ ಕ್ರಮದ ಬಗೆಗೆ ಲಕ್ಷಣವನ್ನು ತಿಳಿಸುವ ಮುಖ್ಯ ಗ್ರಂಥವೆಂದರೆ ೧ನೇ ನಾಗವರ್ಮನ 'ಛಂದೋಂಬುಧಿ'. ಇದು ಹಳಗನ್ನಡ ಪದ್ಯಗಳಲ್ಲಿ ರಚಿಸಲ್ಪಟ್ಟಿದೆ. ಇದೇ ಕನ್ನಡ ಛಂದಸ್ಸನ್ನು ವಿವರವಾಗಿ ತಿಳಿಸುವ ಗ್ರಂಥವಾಗಿದೆ.


ISSN-2395-0994



ಮುದ್ದು ಮಗಳು

ಹಾಸಿಗೆಯ ತುದಿಯಲ್ಲಿ ಕುಳಿತು

ಕವಿತೆಯನ್ನೋದಲು ದುಂಬಾಲು ಬೀಳುತ್ತಾಳೆ.

ಆಗ ನನ್ನ ಕಣ್ಣಾಲಿಯಿಂದ ಹನಿಯೊಂದು ಉದುರುತ್ತದೆ.

ಅವಳು ಅದನ್ನೆತ್ತಿ !

ಅಮ್ಮಾ... ಇದು ಕಣ್ಣೀರು; ಕವಿತೆಯಲ್ಲ ! ಎನ್ನುತ್ತಾಳೆ.

ಕವಿತೆ ಮತ್ತು ಕಣ್ಣೀರು ಎರಡೂ ಅವಳಿ !

ಎಂದು ಅವಳಿಗೆ ಹೇಳುವುದು ಹೇಗೆ?

–ಕನ್ನಡಕ್ಕೆ : ಸುನೈನಾ ಪಾಟೀಲ

**Rachana Publishing House**

No. 10-646, Near S.B. Temple

KALABURAGI-585 103 - Karnataka